ಸಿಸಿ ನಂಃ 2226/2024

ಸಿ.ಡಬ್ಲೂ – 12

ಪಿ.ಡಬ್ಲೂ –5

## 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿದ್ರಾಮಪ್ಪ |
| ತಂದೆಯ ಹೆಸರು | : | ಬುಗಪ್ಪಾ |
| ವಯಸ್ಸು | : | 68 ವರ್ಷ |
| ಉದ್ಯೋಗ | : | ವೈದ್ಯರು |
| ವಾಸ ಸ್ಥಳ | : | ಹುಬ್ಬಳ್ಳಿ. |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :02-02-2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

2017 ರಿಂದ ಇಲ್ಲಿಯವರೆಗೂ ನಾನು ಕಿಮ್ಸ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡಿರುತ್ತೇನೆ. ದಿಃ 24-06-2025 ರಂದು ರಾತ್ರಿ 9.24 ಗಂಟೆಗೆ 1 ನೇ ಆರೋಪಿ ಅಪಘಾತದ ಹಿನ್ನಲೆಯಲ್ಲಿ ಜಿಲ್ಲಾ ಆಸ್ಪತ್ರೆ ಧಾರವಾಡ ಅವರು ಚಿಕಿತ್ಸೆಗೆ ಕಳುಹಿಸಿಕೊಟ್ಟಿದ್ದರು. ಸದರಿಯವರನ್ನು ಪರೀಕ್ಷೆ ಮಾಡಿದಾಗ ತಲೆಯ ಎಡಭಾಗದಲ್ಲಿ ತಲೆಗೆ ಹಾಕಿದ ಗಾಯ ಕಂಡುಬಂದಿರುತ್ತದೆ. ನಂತರ ನಾವು ಅವರನ್ನು ಶಸ್ತ್ರಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುತ್ತೇವೆ. ಸದರಿಯವರು ಎಕ್ಸರೇ ಹಾಗೂ ಸಿಟಿ ಸ್ಕ್ಯಾನ ಮಾಡಿಸಿದ್ದು ಎಕ್ಸರೇಯಲ್ಲಿ ಯಾವುದೇ ತೊಂದರೆ ಕಾಣಿಸಿಕೊಂಡಿಲ್ಲ ಸಿಟಿ ಸ್ಕಾನ ವರದಿಯಲ್ಲಿ ಸ್ವಲ್ಪ ಬಾವು ಇದೆ ಎಂದು ವರದಿ ಬಂದಿರುತ್ತದೆ

ಇದರ ಬಗ್ಗೆ ನಾನು ವರದಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 10 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 10 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಗಾಯದ ಪ್ರಮಾಣ ಪತ್ರ ಕೊಟ್ಟಿಲ್ಲ, ಆದರೆ ವರದಿಯನ್ನು ಕೊಟ್ಟಿರುತ್ತೇನೆ. ಸದರಿ ಗಾಯ ಹೇಗೆ ಆಗಿತ್ತು ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ.ಹಾಗೂ ಜೆಎಂಎಫ್‌ಸಿ,
ಧಾರವಾಡ.